ಇ) ಬಂದಿದೆ

ಈ) ಹೌದು

ಉ) ಇದೆ.

ಅನುಬಂಧ

ಬೀದರ್ ಜಿಲ್ಲೆಯಲ್ಲಿನ ತಾಲ್ಲೂಕುವಾರು ಖಾಲಿ ಇರುವ ಆರೋಗ್ಯಧಿಕಾರಿ, ದರ್ಜೆ-ಎ (ಕಿರಿಯ) ವೈದ್ಯರ ವಿವರ:

	ಮಂಜೂರು ಆಗಿರುವ	ಕೆಲಸ ಮಾಡುತ್ತಿರುವ	ಖಾಲಿ ಇರುವ
ಜಿಲ್ಲಾ ಆಸ್ಪತ್ರೆ, ಬೀದರ್	5	3	2
ಸಾರ್ವಜನಿಕ ಆಸ್ಪತ್ರೆ, ಬಸವಕಲ್ಯಾಣ	2	2	0

ಬೀದರ್ ಜಿಲ್ಲೆಯಲ್ಲಿನ ತಾಲ್ಲೂಕುವಾರು ಖಾಲಿ ಇರುವ ಸಹಾಯಕ ಶಸ್ತ್ರ ಚಿಕಿತ್ಸಕರ ವಿವರ

ಕ್ರಮ ಸಂಖ್ಯೆ	ತಾಲ್ಲೂಕಿನ ಹೆಸರು	ಮಂಜೂರಾಗಿರುವ ಸಂಖ್ಯೆ		ಖಾಲಿ ಇರುವ ಸಂಖ್ಯೆ	
		ಪುರುಷ	ಮಹಿಳಾ	ಪುರುಷ	ಮಹಿಳಾ
1)	ಬೀದರ್	25	6	1	1
2)	ಔರಾದ್	16	3	10	3
3)	ಹುಮನಾಬಾದ್	13	3	1	-
4)	ಭಾಲ್ಕಿ	11	3	4	1
5)	ಬಸವಕಲ್ಯಾಣ	15	2	2	2
		80	17	18	7
ಒಟ್ಟು		97		25	

ಶಿಕಾರಿಪುರ ನಗರದ ಜನರಲ್ ಆಸ್ಪತ್ರೆಗೆ ಹೆಚ್ಚಿನ ಸಿಬ್ಬಂದಿ ಇತರೆ ಸವಲತ್ತು ಒದಗಿಸುವುದು

(108) - ಶ್ರೀ ಬಿ.ಎಸ್. ಯಡಿಯೂರಪ್ಪ (ಶಿಕಾರಿಪುರ) : ಮಾನ್ಯ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) *ಶಿಕಾರಿಪುರ ನಗರದಲ್ಲಿ ಜನರಲ್ ಆಸ್ಪತ್ರೆ ಕಟ್ಟಡ ಪೂರ್ಣವಾಗಿದ್ದರೂ ಅದಕ್ಕೆ ಬೇಕಾದ ಹಚ್ಚಿಗೆ ಸಿಬ್ಬಂದಿ ನೇಮಿಸದೆ ಇರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ?*

ಆ) *ಸದರಿ ಆಸ್ಪತ್ರೆಗೆ ಮಂಜೂರಾತಿ "ಮೆಟಡಾರ್ ವ್ಯಾನ್" ಬೇರೆ ತಾಲ್ಲೂಕಿನ ಆಸ್ಪತ್ರೆಗಾಗಿ ಉಪಯೋಗಿಸುತ್ತಿರುವುದು ನಿಜವೆ?*

ಇ) *ಹಾಗಿದ್ದರೆ ಅದಕ್ಕೆ ಕಾರಣವೇನು?*

ಶ್ರೀಮತಿ ಕೆ.ಎಸ್. ನಾಗರತ್ನಮ್ಮ (ಆರೋಗ್ಯ ಮಂತ್ರಿಗಳು):

ಅ) ಬಂದಿದೆ.

ಆ) ಇಲ್ಲ.

ಇ) ಮೇಲಿನ ಉತ್ತರದಿಂದ ಈ ಪ್ರಶ್ನೆ ಉದ್ಭವಿಸುವುದಿಲ್ಲ.

ಶಿಕಾರಿಪುರ ನಗರದ ಪ್ರಥಮ ದರ್ಜೆ ಕಾಲೇಜಿನ ವಿದ್ಯಾರ್ಥಿಗಳ ಸಂಖ್ಯೆ ಬಗ್ಗೆ

(109) - ಶ್ರೀ ಬಿ. ಎಸ್. ಯಡಿಯೂರಪ್ಪ (ಶಿಕಾರಿಪುರ) : ಮಾನ್ಯ ಶಿಕ್ಷಣ ಮತ್ತು ಸಂಸದೀಯ ವ್ಯವಹಾರಗಳ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವುವರೆ?

ಅ) ಶಿಕಾರಿಪುರ ನಗರದ ಪ್ರಥಮ ದರ್ಜೆ ಕಾಲೇಜಿನಲ್ಲಿ ವಿದ್ಯಾಭ್ಯಾಸ ಮಾಡುತ್ತಿರುವ ವಿದ್ಯಾರ್ಥಿ ಹಾಗೂ ವಿದ್ಯಾರ್ಥಿನಿಯರ ಸಂಖ್ಯೆ ಎಷ್ಟು?

ಆ) ಸದರಿ ಕಾಲೇಜಿನಲ್ಲಿ, ಯಾವ ಯಾವ ವಿಭಾಗಗಳಲ್ಲಿ ವಿದ್ಯಾಭ್ಯಾಸ ನಡೆಯುತ್ತಿದೆ.

ಇ) ಸದರಿ ಕಾಲೇಜಿನಲ್ಲಿರುವ ಕೊಠಡಿಗಳ ಸಂಖ್ಯೆ ಎಷ್ಟು? ಓದುತ್ತಿರುವ ವಿದ್ಯಾರ್ಥಿ, ವಿದ್ಯಾರ್ಥಿನಿಯರ ಸಂಖ್ಯೆಗೆ ಅನುಗುಣವಾಗಿ ಕೊಠಡಿಗಳು ಇಲ್ಲದೆ ಇರುವುದರಿಂದ ಉಂಟಾಗಿರುವ ತೊಂದರೆ ಸರ್ಕಾರದ ಗಮನಕ್ಕೆ ಬಂದಿರುತ್ತದೆಯೇ?

ಈ) ಹೊಸದಾಗಿ ನಿರ್ಮಿಸಲಾಗುತ್ತಿರುವ ಕಟ್ಟಡದಲ್ಲಿ ಎಷ್ಟು ಜನ ವಿದ್ಯಾರ್ಥಿ-ವಿದ್ಯಾರ್ಥಿನಿಯರಿಗೆ ಸ್ಥಳಾವಕಾಶ ಕಲ್ಪಿಸಬಹುದು. ಅವಶ್ಯವಿರುವ ಕೊಟಡಿಗಳ ಸಂಖ್ಯೆ ಎಷ್ಟು, ಕಟ್ಟುತ್ತಿರುವ ಕೊಠಡಿಗಳೆಷ್ಟು?

ಶ್ರೀ ಎಂ. ವೀರಪ್ಪ ಮೊಯಿಲಿ (ಶಿಕ್ಷಣ ಮತ್ತು ಸಂಸದೀಯ ವ್ಯವಹಾರ ಸಚಿವರು) :

ಅ) ಶಿಕಾರಿಪುರದ ನಗರದ ಪ್ರಥಮ ದರ್ಜೆ ಕಾಲೇಜಿನಲ್ಲಿ 1990-91ನೇ ಸಾಲಿನಲ್ಲಿ ವಿದ್ಯಾಭ್ಯಾಸ ಮಾಡುತ್ತಿರುವ ವಿದ್ಯಾರ್ಥಿಗಳ ಸಂಖ್ಯೆ: 250

ವಿದ್ಯಾರ್ಥಿನಿಯರ ಸಂಖ್ಯೆ 111

ಒಟ್ಟು 361

ಆ) ಸದರಿ ಕಾಲೇಜಿನಲ್ಲಿ ಬಿ.ಎ. ಮತ್ತು ಬಿ.ಕಾಂ ವಿಭಾಗಗಳಲ್ಲಿ ವಿದ್ಯಾಭ್ಯಾಸ ನಡೆಯುತ್ತಿದೆ.

ಇ) ಸದರಿ ಕಾಲೇಜಿನಲ್ಲಿರುವ ಕೊಠಡಿಗಳ ಸಂಖ್ಯೆ -07 ಓದುತ್ತಿರುವ ವಿದ್ಯಾರ್ಥಿ–ವಿದ್ಯಾರ್ಥಿನಿಯರ ಸಂಖ್ಯೆಗೆ ಅನುಗುಣವಾಗಿ ಕೊಠಡಿಗಳು ಇಲ್ಲದೆ ಇರುವುದರಿಂದ ಉಂಟಾಗಿರುವ ತೊಂದರೆ ಸರ್ಕಾರದ ಗಮನಕ್ಕೆ ಬಂದಿರುತ್ತದೆ.

ಈ) ಹೊಸದಾಗಿ ನಿರ್ಮಿಸಲಾಗುತ್ತಿರುವ ಕಟ್ಟಡದಲ್ಲಿ ಸುಮಾರು 250 ವಿದ್ಯಾರ್ಥಿ–ವಿದ್ಯಾರ್ಥಿನಿಯರಿಗೆ ಸ್ಥಳಾವಕಾಶ ಕಲ್ಪಿಸಬಹುದು.

ಅವಶ್ಯವಿರುವ ಕೊಠಡಿಗಳ ಸಂಖ್ಯೆ: 07

ಕಟ್ಟುತ್ತಿರುವ ಕೊಠಡಿಗಳು ಈ ರೀತಿ ಇವೆ:

(ಅ) ಪ್ರಾಂಶುಪಾಲರ ಕೊಠಡಿ	01
(ಆ) ಕಚೇರಿ	01
(ಇ) ಗ್ರಂಥಾಲಯ	01
(ಈ) ತರಗತಿ ಕೊಠಡಿಗಳು	03
	07